# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
## "ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105

ಕುಲಸಚಿವರು

**ವಿಶ್ರೀಕೃವಿಬ/ಆಡಳಿತ–ಪ್ರಸಾರಾಂಗ/ಪ್ರಕಟಣೆ/ಸುತ್ತೋಲೆ/2022–23/2492** **ದಿನಾಂಕ:30–01–2023**

**<u>ಸುತ್ತೋಲೆ</u>**

ವಿಷಯ : ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿಸುತ್ತಿರುವ ಜರ್ನಲ್‌ಗಳಿಗೆ ಸಂಶೋಧನಾ/ವಿದ್ವತ್ ಲೇಖನಗಳು ಹಾಗೂ ಕಲೆ ಸಂಸ್ಕೃತಿ ಕುರಿತ ಲೇಖನಗಳನ್ನು ಆಹ್ವಾನಿಸುತ್ತಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 27.01.2023.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರಗಳು, ವಿಶ್ವವಿದ್ಯಾಲಯದ ಅಧೀನ ಸರ್ಕಾರಿ/ಅನುದಾನಿತ/ಅನುದಾನ ರಹಿತ ಖಾಸಗಿ ಕಾಲೇಜುಗಳ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಅತಿಥಿ ಉಪನ್ಯಾಸಕರು ಮತ್ತು ಇತರೆ ಸಿಬ್ಬಂದಿಗಳಿಗೆ ತಿಳಿಸುವುದೇನೆಂದರೆ, ಪ್ರಸಕ್ತ ವರ್ಷದಿಂದ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ಕಲಾ, ಮಾನವಿಕ ಹಾಗು ವಾಣಿಜ್ಯಶಾಸ್ತ್ರ ಮತ್ತು ನಿರ್ವಹಣಾಶಾಸ್ತ್ರ ವಿಷಯಗನ್ನೊಳಗೊಂಡಂತೆ ಮತ್ತು ವಿಜ್ಞಾನ ವಿಷಯವನ್ನೊಳಗೊಂಡಂತೆ ತಲಾ ಒಂದು ಒಟ್ಟು ಎರಡು ತ್ರೈಮಾಸಿಕ ಜರ್ನಲ್‌ಗಳನ್ನು ಹೊರತರಲು ಉದ್ದೇಶಿಸಲಾಗಿದೆ.

ಈ ಜರ್ನಲ್‌ಗಳಲ್ಲಿ ಪ್ರಕಟಿಸಲು ತಮ್ಮ ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದ ಅಪ್ರಕಟಿತ ಸಂಶೋಧನಾ/ವಿದ್ವತ್ ಲೇಖನಗಳನ್ನು ಹಾಗೂ ಕಲೆ, ಸಂಸ್ಕೃತಿ, ವೈಚಾರಿಕ ಚಿಂತನೆಗಳುಳ್ಳ ಪ್ರಬುದ್ಧ ಲೇಖನಗಳು, ಅನುವಾದಿತ ಕವಿತೆಗಳನ್ನು **15 ಫೆಬ್ರವರಿ 2023 ನೊಳಗಾಗಿ**–ನಿರ್ದೇಶಕರು, ಪ್ರಸಾರಾಂಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಜ್ಞಾನಸಾಗರ ಆವರಣ, ಬಳ್ಳಾರಿ–583 105–ಈ ವಿಳಾಸಕ್ಕೆ ಹಾರ್ಡ್ ಕಾಪಿಯನ್ನು ಕಳುಹಿಸಲು ತಿಳಿಸಿದೆ. ಲೇಖನಗಳ ಸಾಫ್ಟ್ ಕಾಪಿಯನ್ನು ಪ್ರಸಾರಾಂಗದ ಇ–ಮೇಲ್ prasaranga@vskub.ac.in ವಿಳಾಸಕ್ಕೆ ಸಲ್ಲಿಸಲು ತಿಳಿಸಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

**ನಿಬಂಧನೆಗಳು :**

1. ನಿಗದಿತ ದಿನಾಂಕದ ನಂತರ ಸ್ವೀಕೃತವಾದ ಲೇಖನಗಳನ್ನು ಪ್ರಕಟಣೆಗೆ ಪರಿಗಣಿಸುವುದಿಲ್ಲ. ಒಮ್ಮೆ ಕಳುಹಿಸಿದ ಲೇಖನಗಳನ್ನು ಯಾವುದೇ ಕಾರಣಕ್ಕೂ ಮರಳಿ ನೀಡುವುದಿಲ್ಲ.
2. ಲೇಖನಗಳು ಕನ್ನಡದಲ್ಲಿದ್ದರೆ ಮೈಕ್ರೊಸಾಫ್ಟ್ ನುಡಿ–1 ರಲ್ಲಿ ಅಕ್ಷರಗಳ ಗಾತ್ರ 14 ಫಾಂಟ್‌ಗಳಲ್ಲಿರಬೇಕು.
3. ಲೇಖನಗಳು ಇಂಗ್ಲಿಷ್‌ನಲ್ಲಿದ್ದರೆ Times New Roman ನಲ್ಲಿ ಅಕ್ಷರಗಳ ಗಾತ್ರ 12 ಫಾಂಟ್‌ಗಳಲ್ಲಿರಬೇಕು.
4. ಚಿತ್ರಗಳು/ಡ್ರಾಯಿಂಗ್‌ಗಳು ಸ್ಪಷ್ಟವಾಗಿರಬೇಕು.
5. ಆಯ್ಕೆಯಾದ ಲೇಖನಗಳ ಅಂತಿಮ ಕರಡನ್ನು ಆಯಾ ಲೇಖಕರು ಪರಿಶೀಲಿಸಿ ತಮ್ಮ ಸಮ್ಮತಿ ಸೂಚಿಸಬೇಕು. ಇಲ್ಲದಿದ್ದರೆ ಪ್ರಕಟಣೆಯಿಂದ ಕೈಬಿಡಲಾಗುವುದು.

6. ಲೇಖನಗಳಲ್ಲಿನ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಸಂಪೂರ್ಣ ಹೊಣೆಗಾರರು, ವಿಶ್ವವಿದ್ಯಾಲಯವಲ್ಲ.
7. ಪ್ರಕಟಣೆಗೆ ಸ್ವೀಕೃತವಾದ ಲೇಖನಗಳನ್ನು ವಿಶ್ವವಿದ್ಯಾಲಯದ ಪ್ರಸಾರಾಂಗದ ಸಂಪಾದನಾ ಸಮಿತಿಯು ಪರಿಶೀಲಿಸಿ ಪ್ರಕಟಣೆಗೆ ಅರ್ಹವಾದ ಲೇಖನಗಳನ್ನು ಮಾತ್ರ ಪ್ರಕಟಿಸಲಾಗುವುದು. ಸಂಪಾದನಾ ಸಮಿತಿಯ ನಿರ್ಣಯವೇ ಅಂತಿಮ. ಲೇಖನ ಆಯ್ಕೆಯಾದಲ್ಲಿ ಲೇಖನದಾರರಿಗೆ ತಿಳಿಸಲಾಗುವುದು. ಲೇಖನದಾರರು ತಮ್ಮ ಮೊಬೈಲ್ ನಂಬರ್, ಇ-ಮೇಲ್ ವಿಳಾಸಗಳನ್ನು ಹಾಗೂ ವಿಳಾಸಗಳನ್ನು ನೀಡುವುದು. ಯಾವುದೇ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.
8. ಲೇಖನಗಳು ಜರ್ನಲ್‌ಗಳಲ್ಲಿ ಪ್ರಕಟವಾದಲ್ಲಿ ಲೇಖನದಾರರಿಗೆ ಅದರ ಎರಡು ಪ್ರತಿಗಳನ್ನು ಮಾತ್ರ ಗೌರವ ಪ್ರತಿಗಳಾಗಿ ನೀಡಲಾಗುವುದು.
9. ಪ್ರಕಟಿತವಾದ ಲೇಖನಗಳ ಲೇಖನದಾರರಿಗೆ ಅದರ ಆಫ್‌ಪ್ರಿಂಟ್‌ಗಳ 25 ಪ್ರತಿಗಳನ್ನು ಮಾತ್ರ ನೀಡಲಾಗುವುದು.
10. ಲೇಖನದಾರರಿಗೆ ಯಾವುದೇ ಗೌರವ ಸಂಭಾವನೆ ಇರುವುದಿಲ್ಲ.

**ಪ್ರತಿಗಳು:**

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
2. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
3. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
5. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ.ಕೊಪ್ಪಳ/ಯಲಬುರ್ಗಾ.
7. ಬಳ್ಳಾರಿ ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
9. ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಅಳವಡಿಸಲು.
10. ಕಛೇರಿ ಪ್ರತಿ.